<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**<u>ಸಿ.ಸಿ. ಸಂಖ್ಯೆ: 2870/2022</u>**

**ಸಾಕ್ಷಿಯನ್ನು ದಿಃ 03.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಆರ್. ರಮೇಶ | ಪಿಡಬ್ಲ್ಯೂ:2 |
| ತಂದೆಯ ಹೆಸರು | ಲೇಟ್ ರಾಮಶೆಟ್ಟಿ | |
| ವಯಸ್ಸು | 56 ವರ್ಷ | |
| ಉದ್ಯೋಗ | ಎ.ಎಸ್.ಐ ಹುಣಸೂರು ಪಟ್ಟಣ ಪೊಲೀಸ್ ಠಾಣೆ | |
| ವಾಸಸ್ಥಳ | ಕೆ.ಆರ್ ನಗರ. | |

**<u>ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರಡಿ ಸಾಕ್ಷಿ ವಿಚಾರಣೆ</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ದಿಃ 28.07.2022 ರಿಂದ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಕೇಸಿನಲ್ಲಿ ದಿಃ 15.09.2023 ರಂದು ಮೈಸೂರು ಸಿಟಿ, ಶಾಂತಿ ನಗರ, 6 ನೇ ರಸ್ತೆಯಲ್ಲಿರುವ ಎ.ಜಿ ಫ್ರಾವಿಜನ್ ಸ್ಟೋರ್ ಮುಂಭಾಗ ಜಾಫರ್ ಅಲಿಯಾಸ್ ಜಾಫರ್ ಖಾನ್ ಬಿನ್ ಮನಾವರ್ ಪಾಷಾ ಪಂಚಾಯಿತಿದಾರರಾದ ರೆಹಮತ್ ಮತ್ತು ಇಲಿಯಾಸ್ ರವರ ಸಮಕ್ಷಮ ನ್ಯಾಯಾಲಯದ ಸಿಸಿ ನಂ.2870/2022 ರಲ್ಲಿ ಆರೋಪಿ ರವರಿಗೆ ಉದ್ಘೋಷಣೆಯನ್ನು ದಿಃ 30.10.2023 ಹೊರಡಿಸಿದ್ದು, ಸದರಿ ಉದ್ಘೋಷಣೆಯು ಆರೋಪಿಯ ಬಗ್ಗೆ ಪಂಚಾಯಿತಿದಾರರಲ್ಲಿ ವಿಚಾರ ಮಾಡಲಾಗಿ ಆರೋಪಿ ಜಾಫರ್ ಅಲಿಯಾಸ್ ಜಾಫರ್ ಖಾನ್ ರವರ ಬಗ್ಗೆ ವಿಚಾರ ಮಾಡಲಾಗಿ ಸದರಿ ಶಾಂತಿ ನಗರ, 6 ನೇ ರಸ್ತೆಯಲ್ಲಿ ಜಾಫರ್ ಅಲಿಯಾಸ್ ಜಾಫರ್ ಖಾನ್ ಎಂಬುವವರು ಯಾರೂ ಇರುವುದಿಲ್ಲವೆಂದು ಪಂಚಾಯಿತದಾರರು ತಿಳಿಸಿರುತ್ತಾರೆ.

ಸದರಿ ಆರೋಪಿ ಪತ್ತೆ ಆದಲ್ಲಿ ದಿಃ 30.10.2023 ರಂದು ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಪಂಚಾಯಿತಿದಾರರಾಲ್ಲಿ ಉದ್ಘೋಷಣೆಯ ವಾರೆಂಟ್ ಅನ್ನು ಮಹಾನಗರ ಪಾಲಿಕೆ ಯ ವಲಯ ಕಛೇರಿ 8 ನೊಟೀಸು ಬೋರ್ಡ್ಗೆ ಅಂಟಿಸಲಾಯಿತು, ಇನ್ನೊಂದು ಪ್ರತಿಯನ್ನು ಎ.ಜಿ ಪ್ರಾವಿಜನ್ ಸ್ಟೋರ್ ಮುಂಭಾಗ ಬೋರ್ಡ ಅಲ್ಲಿ ಅಂಟಿಸಲಾಯಿತು, ನಂತರ ಶಾಂತಿ ನಗರದ ರಸ್ತೆಯಲ್ಲಿ ಟಾಂ ಟಾಂ ರೀತಿಯಲ್ಲಿ ಉದ್ಘೋಷಣೆಯನ್ನು ಏರು ಧ್ವನಿಯಲ್ಲಿ ಸಾರಿ ಸಾರಿ ಹೇಳಲಾಯಿತು. ಮತ್ತೊಂದು ಪ್ರತಿಯನ್ನು ನ್ಯಾಯಾಲಯದ ನೊಟೀಸು ಬೋರ್ಡ್ ಅಲ್ಲಿ ಅಂಟಿಸಿ ಉದ್ಘೋಷಣೆಯನ್ನು ಕಾರ್ಯಗತಗೊಳಿಸಲಾಯಿತು.

ಮಧ್ಯಾಹ್ನ 3 ರಿಂದ 4 ಗಂಟೆ ವರೆಗೆ ಮಹಜರ್ ಜರುಗಿಸಿರುತ್ತೇನೆ. ಸದರಿ ಮಹಜರ್ ಅನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು 6 (ಎ) ಎಂದು, ಪಂಚರಾದ ರೆಹಮತ್ ಮತ್ತು ಇಲಿಯಾಸ್ ರವರ ಸಹಿಗಳನ್ನು ಕ್ರಮವಾಗಿ ನಿಪಿ. 6(ಬಿ ಮತ್ತು ಸಿ ) ಎಂದು ಗುರುತಿಸಲಾಯಿತು.

ಆರೋಪಿಯ ಹೆಸರಿನಲ್ಲಿ ಸ್ಥಿರಾಸ್ಥಿ ಇರುವ ಬಗ್ಗೆ ಅಟ್ಯಾಚ್ ಮೆಂಟ್ ವಾರೆಂಟ್ ಹೊರಡಿಸಿದ್ದು, ಮಹಾನಗರ ಪಾಲಿಕೆ, ವಲಯ ಕಛೇರಿ 8ಗೆ ಮನವಿ ಸಲ್ಲಿಸಿರುತ್ತೇನೆ. ನಂತರ ಸದರಿಯವರು ಆರೋಪಿತನ ಹೆಸರಿನಲ್ಲಿ ಯಾವುದೆ ಸ್ಥಿರ ಮತ್ತು ಚರಾಸ್ಥಿ ಇರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ನಿಪಿ.7 ಎಂದು ಗುರುತಿಸಲಾಯಿತು.

ಅದೆ ದಿನ ದಿಃ 15.09.2023 ಮೈಸೂರು ಸಿಟಿ, ಗೌಷಿಯಾ ನಗರ, ವಾರ್ಡ ನಂ. 23, ಎಕ್ಕಿನಾರ್ ಮಸೀದಿ ಮುಂಭಾಗ ಆರೋಪಿ ಮಹಮ್ಮದ್ ಇಫ್ತಾಕರ್ ಅಲಿಯಾಸ್ ಗಿಡ್ಡು ಬಿನ್ ಕಲೀಮ್ ಉಲ್ಲಾ ಪಂಚಾಯಿತಿದಾರರಾದ ರಫೀಕ್ ಮತ್ತು ಮೊಹಮದ್ ಖಾದರ್ ರವರ ಸಮಕ್ಷಮ ನ್ಯಾಯಾಲಯದ ಸಿಸಿ ನಂ.2870/2022 ರಲ್ಲಿ ಆರೋಪಿ ರವರಿಗೆ ಉದ್ಘೋಷಣೆಯನ್ನು ದಿಃ 30.10.2023 ಹೊರಡಿಸಿದ್ದು, ಸದರಿ ಉದ್ಘೋಷಣೆಯು ಆರೋಪಿಯ ಬಗ್ಗೆ ಪಂಚಾಯಿತಿದಾರರಲ್ಲಿ ವಿಚಾರ ಮಾಡಲಾಗಿ ಆರೋಪಿ ಮಹಮ್ಮದ್ ಇಫ್ತಾಕರ್ ಅಲಿಯಾಸ್ ಗಿಡ್ಡು ಬಿನ್ ಕಲೀಮ್ ಉಲ್ಲಾ ಬಗ್ಗೆ ವಿಚಾರ ಮಾಡಲಾಗಿ ಈಗ್ಗೆ 3 ವರ್ಷಗಳ ಹಿಂದೆ ತಮ್ಮ ಬಡಾವಣೆಯಲ್ಲಿ ಕಾಣುತ್ತಿರುವುದಿಲ್ಲವೆಂದು, ಅವರು ಎಲ್ಲಿ ಹೋಗಿರುತ್ತಾರೆಎಂದು ಗೊತ್ತಿಲ್ಲ ಎಂದು ಪಂಚಾಯಿತದಾರರು ತಿಳಿಸಿರುತ್ತಾರೆ.

ಸದರಿ ಆರೋಪಿ ಪತ್ತೆ ಆದಲ್ಲಿ ದಿಃ 30.10.2023 ರಂದು ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಪಂಚಾಯಿತಿದಾರರಾಲ್ಲಿ ಉದ್ಘೋಷಣೆಯ ವಾರೆಂಟ್ ಅನ್ನು ಗೌಷಿಯಾ ನಗರದಲ್ಲಿ ಎಕ್ಕಿನಾರ್ ಮಸೀದಿಯ ಗೋಡೆಯ ಮೇಲೆ ಅಂಟಿಸಲಾಯಿತು, ಇನ್ನೊಂದು ಪ್ರತಿಯನ್ನು ಸಂಬಂಧ

ಮಹಾ ನಗರ ಪಾಲಿಕೆ ವಲಯ ಕಛೇರಿ 9 ರ ನೋಟೀಸು ಬೋರ್ಡ ಅಲ್ಲಿ ಅಂಟಿಸಲಾಯಿತು, ನಂತರ ಗೌಷಿಯಾ ನಗರದಲ್ಲಿ ಟಾಂ ಟಾಂ ರೀತಿಯಲ್ಲಿ ಉದ್ಘೋಷಣೆಯನ್ನು ಏರು ಧ್ವನಿಯಲ್ಲಿ ಸಾರಿ ಸಾರಿ ಹೇಳಲಾಯಿತು. ಮತ್ತೊಂದು ಪ್ರತಿಯನ್ನು ನ್ಯಾಯಾಲಯದ ನೋಟೀಸು ಬೋರ್ಡ್ ಅಲ್ಲಿ ಅಂಟಿಸಿ ಉದ್ಘೋಷಣೆಯನ್ನು ಕಾರ್ಯಗತಗೊಳಿಸಲಾಯಿತು.

ಬೆಳಿಗ್ಗೆ 11 ರಿಂದ 12. ಗಂಟೆ ವರೆಗೆ ಮಹಜರ್ ಜರುಗಿಸಿರುತ್ತೇನೆ. ಸದರಿ ಮಹಜರ್ ಅನ್ನು ನಿಪಿ.8 ಎಂದು, ಸಾಕ್ಷಿಯ ಸಹಿಯನ್ನು 8 (ಎ) ಎಂದು, ಪಂಚರಾದ ರಫೀಕ್ ಮತ್ತು ಮೊಹಮದ್ ಖಾದರ್ ರವರ ಸಹಿಗಳನ್ನು ಕ್ರಮವಾಗಿ ನಿಪಿ.8(ಬಿ ಮತ್ತು ಸಿ ) ಎಂದು ಗುರುತಿಸಲಾಯಿತು.

ಆರೋಪಿಯ ಹೆಸರಿನಲ್ಲಿ ಸ್ಥಿರಾಸ್ಥಿ ಇರುವ ಬಗ್ಗೆ ಅಟ್ಯಾಚ್ ಮೆಂಟ್ ವಾರೆಂಟ್ ಹೊರಡಿಸಿದ್ದು, ಮಹಾನಗರ ಪಾಲಿಕೆ, ವಲಯ ಕಛೇರಿ 9 ಕ್ಕೆ ಮನವಿ ಸಲ್ಲಿಸಿರುತ್ತೇನೆ. ನಂತರ ಸದರಿಯವರು ಆರೋಪಿತನ ಹೆಸರಿನಲ್ಲಿ ಯಾವುದೆ ಸ್ಥಿರ ಆಸ್ತಿ ಇರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ನಿಪಿ.9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃಆರೋಪಿ ತಲೆ ಮರಿಸಿಕೊಂಡಿರುತ್ತಾನೆ.**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.